## ಒಳ್ಳೆಯದೇ ಆಗುತ್ತಿದೆ..

ಕನ್ನಡ ಸಿನಿಮಾ ಹಲವು ‘ಒಳ್ಳೆಯ ಸಂಗತಿ’ಗಳಿಗೆ ಸಾಕ್ಷಿಯಾಗುತ್ತಿದೆ. ಡಿಜಿಟಲ್ ವೇದಿಕೆಗಳು ಪ್ರವರ್ಧಮಾನಕ್ಕೆ ಬರುತ್ತಿರುವುದು ಅವುಗಳಲ್ಲಿ ಒಂದು ಎನ್ನುತ್ತಾರೆ ನಟ ಹಾಗೂ ನಿರ್ಮಾಪಕ ರಕ್ಷಿತ್ ಶೆಟ್ಟಿ.



ನಟ ರಕ್ಷಿತ್ ಶೆಟ್ಟಿ

‘ನಮ್ಮಲ್ಲಿ ಮಾಸ್ ಹಾಗೂ ಕ್ಲಾಸ್ ವೀಕ್ಷಕರು ಎನ್ನುವ ವರ್ಗೀಕರಣ ಇದೆ. ಕ್ಲಾಸ್ ವೀಕ್ಷಕರಿಗೆ ಬೇಕಿರುವಂಥ ಸಿನಿಮಾಗಳನ್ನು ನಾವು ಬಹುಕಾಲ ಮಾಡದೇ ಇದ್ದ ಕಾರಣ, ಅವರು ಸಿನಿಮಾಗಳಿಂದ ದೂರ ಉಳಿದಿದ್ದರು. ಈಗ ಒಳ್ಳೆಯ ಸಿನಿಮಾಗಳು ಬರುತ್ತಿವೆ. ಹಾಗಾಗಿ ಕ್ಲಾಸ್ ವೀಕ್ಷಕರು ಪುನಃ ಸಿನಿಮಾಗಳತ್ತ ಬರುತ್ತಿದ್ದಾರೆ. ಈ ವರ್ಗದ ಜನರಿಗೆ ಆನ್‌ಲೈನ್, ಡಿಜಿಟಲ್ ವೇದಿಕೆಗಳೆಲ್ಲ ಗೊತ್ತಿವೆ. ಅವರು ಅಲ್ಲಿ ಒಳ್ಳೆಯ ಸಿನಿಮಾಗಳನ್ನು ನೋಡುತ್ತಿದ್ದಾರೆ’ ಎಂದು ಹೇಳುತ್ತಾರೆ ರಕ್ಷಿತ್.

‘ಅಮೆಜಾನ್, ನೆಟ್‌ಫ್ಲಿಕ್ಸ್‌ಗಳಂತಹ ವೇದಿಕೆಗಳು ಕೂಡ ಮುಂದೊಂದು ದಿನ ಸಿನಿಮಾ ಮಂದಿರಗಳತ್ತ ವೀಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಬರುವಂತೆ ಮಾಡುತ್ತವೆ’ ಎನ್ನುವುದು ಅವರ ವಿಶ್ವಾಸ.

ಡಿಜಿಟಲ್ ವೇದಿಕೆಗಳ ಕುರಿತ ಪ್ರಶ್ನೆಯನ್ನು ‘ಕಹಿ’ ಚಿತ್ರದ ನಿರ್ದೇಶಕ ಅರವಿಂದ ಶಾಸ್ತ್ರಿ ಅವರ ಮುಂದೆ ಇರಿಸಿದಾಗ, ‘ನಾವು ಸಿನಿಮಾ ಕೆಲಸ ಆರಂಭಿಸಿದ ದಿನಗಳಲ್ಲಿ, ಸಿನಿಮಾ ಟ್ರೇಲರ್‌ಅನ್ನು ಯೂಟ್ಯೂಬ್ ಹಾಕಿದೆವು. ಆಗ ಸಿನಿಮಾ ಬಗ್ಗೆ ಜನರಿಗೆ ಗೊತ್ತಾಯಿತು. ಯೂಟ್ಯೂಬ್ ಬರುವ ಮೊದಲು ಇಂತಹ ಸೌಲಭ್ಯ ಇರಲಿಲ್ಲ. ಈಗ ನೆಟ್‌ಫ್ಲಿಕ್ಸ್, ಅಮೆಜಾನ್ ಪ್ರೈಮ್‌ನಂತಹ ವೇದಿಕೆಗಳು ಬಂದಿರುವುದು ಮಾರುಕಟ್ಟೆ ದೃಷ್ಟಿಯಿಂದ ಒಳ್ಳೆಯದು. ಇವುಗಳಿಂದ ಕನ್ನಡ ಸಿನಿಮಾ ಮಾರುಕಟ್ಟೆಗೆ ಮುಂದಿನ ದಿನಗಳಲ್ಲಿ ಖಂಡಿತ ಒಳ್ಳೆಯದಾಗುತ್ತದೆ’ ಎಂದರು.



ಅರವಿಂದ ಶಾಸ್ತ್ರಿ

‘ಅಮೆಜಾನ್ ಪ್ರೈಮ್‌ನಲ್ಲಿ ಕನ್ನಡ ಸಿನಿಮಾ ಕೂಡ ಇರುತ್ತದೆ, ಹಾಲಿವುಡ್ ಸಿನಿಮಾ ಕೂಡ ಇರುತ್ತದೆ. ಎರಡೂ ಬಗೆಯ ಸಿನಿಮಾಗಳು ಒಂದೇ ವೇದಿಕೆಯಲ್ಲಿ ಇರುವಾಗ ಸ್ಪರ್ಧೆ ಇರುತ್ತದೆ. ಅವರ ರೀತಿಯಲ್ಲಿ ನಾವೂ ಚೆನ್ನಾಗಿ ಸಿನಿಮಾ ಮಾಡಬೇಕು ಎಂದು ಅನಿಸುತ್ತದೆ. ಇದರಿಂದ ಚಿತ್ರದ ಗುಣಮಟ್ಟ ಹೆಚ್ಚುತ್ತದೆ’ ಎಂದು ಅವರು ಹೇಳುತ್ತಾರೆ.

## ಹೊಸ ಆದಾಯ ಮೂಲ...

ಹಣ ಕೊಟ್ಟು ಡಿಜಿಟಲ್ ಹಕ್ಕುಗಳನ್ನು ಪಡೆಯುವುದರಿಂದ ನಿರ್ಮಾಪಕರಿಗೆ ಹೊಸದೊಂದು ಆದಾಯ ಮೂಲ ದಕ್ಕುತ್ತದೆಯೇ ಎಂಬ ಪ್ರಶ್ನೆಗೆ ‘ಖಂಡಿತ ಹೌದು’ ಎನ್ನುತ್ತಾರೆ ನಿರ್ದೇಶಕ ಹೇಮಂತ್ ರಾವ್. ‘ಮೊದಲು ಸ್ಯಾಟಲೈಟ್ ಹಕ್ಕುಗಳನ್ನು ಟಿ.ವಿ. ವಾಹಿನಿಗಳಿಗೆ ಕೊಡುತ್ತಿದ್ದೆವು. ಈಗ ಕೆಲವು ವಾಹಿನಿಗಳದ್ದೇ ಆದ ಡಿಜಿಟಲ್ ವೇದಿಕೆಗಳೂ ಇವೆ. ಪ್ರಪಂಚ ಡಿಜಿಟಲ್ ಆಗುತ್ತಿರುವ ಕಾರಣ ಎಲ್ಲರೂ ಡಿಜಿಟಲ್ ವೇದಿಕೆಯತ್ತ ಸಾಗುತ್ತಿದ್ದಾರೆ. ಇದರಿಂದ ನಿರ್ಮಾಪಕರಿಗೆ ಹೊಸ ಆದಾಯ ಮೂಲ ಸೃಷ್ಟಿ ಆಗಿದೆ’ ಎನ್ನುತ್ತಾರೆ ಅವರು.



ಹೇಮಂತ್ ರಾವ್

‘ಆದರೆ ಇದರಿಂದ ಕನ್ನಡದ ವೀಕ್ಷಕರ ಸಂಖ್ಯೆ ಹೆಚ್ಚಾಗಬಹುದೇ ಎಂಬುದನ್ನು ಈಗಲೇ ಖಚಿತವಾಗಿ ಹೇಳಲು ಸಾಧ್ಯವಿಲ್ಲ’ ಎಂಬುದು ಅವರ ನಂಬಿಕೆ.

ಕನ್ನಡ ಸಿನಿಮಾಗಳ ವೀಕ್ಷಕ ವರ್ಗವನ್ನು ವಿಸ್ತರಿಸಿಕೊಳ್ಳಲು ಸಾಧ್ಯ ಎಂದು ಕೆಲವು ನಿರ್ಮಾಪಕರು ಭಾವಿಸಿದ್ದಾರೆ.

‘ಆನ್‌ಲೈನ್ ವೇದಿಕೆಗಳ ಮೂಲಕ ಸಿನಿಮಾಗಳನ್ನು ಕೊಡುವುದರಿಂದ ಎರಡು ಪ್ರಯೋಜನಗಳಿವೆ. ಒಳ್ಳೆಯ ಕಥೆ ಇರುವ ಸಿನಿಮಾ ಸಿದ್ಧಪಡಿಸಿದರೆ, ಡಿಜಿಟಲ್ ಹಕ್ಕುಗಳ ಮಾರಾಟದ ಮೂಲಕ ನಿರ್ದಿಷ್ಟ ಪ್ರಮಾಣದ ಹೆಚ್ಚುವರಿ ಆದಾಯ ಸಂಗ್ರಹಿಸಬಹುದು ಎಂಬ ಭರವಸೆ ನಿರ್ಮಾಪಕರಲ್ಲಿ ಮೂಡುತ್ತದೆ. ಹಾಗೆಯೇ, ಆನ್‌ಲೈನ್ ವೇದಿಕೆಗಳಿಗೆ ಚಂದಾದಾರರಾಗಿರುವ ಅನ್ಯಭಾಷಿಗರೂ ಕನ್ನಡ ಸಿನಿಮಾಗಳನ್ನು ವೀಕ್ಷಿಸಿ ನಮ್ಮ ಸಿನಿಮಾಗಳ ಕಡೆ ಮುಂದೊಂದು ದಿನ ಆಕರ್ಷಿತರಾಗಬಹುದು. ಆಗ, ಕನ್ನಡ ಸಿನಿಮಾ ವೀಕ್ಷಕರ ನೆಲೆ ವಿಸ್ತರಿಸುತ್ತದೆ’ ಎನ್ನುತ್ತಾರೆ ನಿರ್ಮಾಪಕ ಪುಷ್ಕರ ಮಲ್ಲಿಕಾರ್ಜುನಯ್ಯ.

ಟಿ.ವಿ. ವಾಹಿನಿಗಳಿಗೆ ಸಿನಿಮಾ ಸ್ಯಾಟಲೈಟ್ ಹಕ್ಕುಗಳನ್ನು ಮಾರಾಟ ಮಾಡುವುದು ಕನ್ನಡ ಸಿನಿಮಾ ಉದ್ಯಮದ ಪಾಲಿಗೆ ಹೊಸದೇನೂ ಅಲ್ಲ. ಆದರೆ, ಇಲ್ಲೊಂದು ಮಹತ್ವದ ಬೆಳವಣಿಗೆ ನಡೆದಿದೆ. ಕೆಲವು ವಾಹಿನಿಗಳು ತಮ್ಮದೇ ಆದ ಆನ್‌ಲೈನ್ ಆ್ಯಪ್‌ಗಳನ್ನೂ ಹೊಂದಿವೆ. ಟಿ.ವಿ. ಮೂಲಕ ಪ್ರಸಾರ ಮಾಡಿದ ಸಿನಿಮಾಗಳನ್ನುತಮ್ಮ ಆ್ಯಪ್‌ಗಳಲ್ಲೂ ಲಭ್ಯವಿರುವಂತೆ ಮಾಡುತ್ತಿವೆ. ‘ಡಿಜಿಟಲ್ ಹಕ್ಕು ಮಾರಾಟದಿಂದ ಆದಾಯ ಗಿಟ್ಟಿಸಿಕೊಳ್ಳುವುದು ಕನ್ನಡದ ಪಾಲಿಗೆ ತುಸು ಹೊಸದು. ಸ್ಯಾಟಲೈಟ್ ಹಕ್ಕುಗಳನ್ನು (ಅಂದರೆ ಟಿ.ವಿ. ವಾಹಿನಿ ಮೂಲಕ ಪ್ರಸಾರ ಮಾಡುವ ಹಕ್ಕು) ಡಿಜಿಟಲ್ ಹಕ್ಕುಗಳನ್ನು (ಅಂದರೆ, ಆ್ಯಪ್ ಅಥವಾ ಆನ್‌ಲೈನ್ ವೇದಿಕೆಗಳ ಮೂಲಕ ಪ್ರಸಾರ ಮಾಡುವ ಹಕ್ಕು) ಪ್ರತ್ಯೇಕವಾಗಿ ಮಾರಾಟ ಮಾಡುವ ಪರಿಪಾಠ ಪೂರ್ತಿಯಾಗಿ ಬೆಳೆದಿಲ್ಲ’ ಎನ್ನುವುದು ನಿರ್ಮಾಪಕರೊಬ್ಬರ ಅನಿಸಿಕೆ.

‘ಬೇರೆ ಭಾಷೆಗಳಲ್ಲಿ ಸ್ಯಾಟಲೈಟ್ ಹಕ್ಕುಗಳನ್ನು, ಡಿಜಿಟಲ್ ಹಕ್ಕುಗಳನ್ನು ಪ್ರತ್ಯೇಕವಾಗಿಯೇ ಮಾರಾಟ ಮಾಡಲಾಗುತ್ತಿದೆ. ಅಲ್ಲಿನ ನಿರ್ಮಾಪಕರು ಈ ವಿಚಾರದಲ್ಲಿ ಸ್ಪಷ್ಟ ನಿಲುವು ತಾಳಿದ್ದಾರೆ. ಕನ್ನಡದಲ್ಲೂ ಅದು ಆಗಬೇಕು’ ಎನ್ನುತ್ತಾರೆ ಮಲ್ಲಿಕಾರ್ಜುನಯ್ಯ.